# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 15-03-2021 ಪ್ರಶ್ನೆ ಸಂಖ್ಯೆ : 1007(1332)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 15-03-2021

ಉತ್ತರಿಸುವ ಸಚಿವರು: ಮಾನ್ಯ ಪ್ರವಾಸೋದ್ಯಮ ಮತ್ತು ಪರಿಸರ ಮತ್ತು ಜೀವಿ ಪರಿಸ್ಥಿತಿ ಸಚಿವರು

ವಿಷಯ : ಸರ್ಕಾರದ ಇಲಾಖೆಗಳ ವೆಬ್‌ಸೈಟ್‌ಗಳ ನಿಯಮಿತ ಮೇಲ್ವಿಚಾರಣೆ ಕುರಿತು

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಇಲಾಖೆಯಿಂದ ಗುರುತಿಸಲಾದ ಪ್ರವಾಸಿ ತಾಣಗಳು ಯಾವುವು; ಇವುಗಳ ಕುರಿತು ಅಂತರ್ಜಾಲದ ಮೂಲಕ ಮಾಹಿತಿಯನ್ನು ಒದಗಿಸಲು ಇಲಾಖೆಯಿಂದ ಕ್ರಮ ವಹಿಸಲಾಗಿದೆಯೇ; ಈ ಪ್ರವಾಸಿ ತಾಣಗಳನ್ನು ಪ್ರವಾಸಿ ಸ್ನೇಹಿಯಾಗಿಸಲು ಯಾವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ; ಕಳೆದ ಮೂರು ವರ್ಷಗಳಲ್ಲಿ ಅಭಿವೃದ್ಧಿಗೆ ಮೀಸಲಿರಿಸಿದ ಅನುದಾನವೆಷ್ಟು; ಬಿಡುಗಡೆಯಾದ ಅನುದಾನವೆಷ್ಟು;

(ಆ) ಪಶ್ಚಿಮ ಘಟ್ಟದಿಂದ ಹರಿಯುವ ನದಿಗಳು, ಜಲಪಾತಗಳು ಹಾಗೂ ಸುಧೀರ್ಘ ಕಡಲತೀರವನ್ನು ಹೊಂದಿರುವ ಈ ಅವಿಭಾಜಿತ ದಕ್ಷಿಣ ಕನ್ನಡ ಜಿಲ್ಲೆಯನ್ನು ಟೂರಿಸಂ ಹಬ್ ಆಗಿಸಲು ಮಾಸ್ಟರ್ ಪ್ಲಾನ್‌ಗಳನ್ನು ತಯಾರಿಸಲಾಗಿದೆಯೇ; ಹೌದಾದರೆ ಅವುಗಳ ಮಾಹಿತಿಯನ್ನು ನೀಡುವುದು;

(ಇ) ಕೇರಳ, ಗೋವಾ ದಂತೆ ಪ್ರವಾಸಿಗರನ್ನು ಆಕರ್ಷಿಸುವ ನಿಟ್ಟಿನಲ್ಲಿ ತೇಲುವ ಮನೆಗಳು ಮತ್ತು ಬೀಚ್ ರೆಸ್ಟೋರೆಂಟ್‌ಗಳನ್ನು ನದಿಗಳ ಹಿನ್ನೀರಿನಲ್ಲಿ ನಿರ್ಮಾಣ ಮಾಡಲು ಅವಕಾಶ ಕಲ್ಪಿಸುವ ಯೋಜನೆಯಿದೆಯೇ ; ನೈಸರ್ಗಿಕ ಪ್ರವಾಸಿ ತಾಣಗಳು ಮತ್ತು ಧಾರ್ಮಿಕ ಕ್ಷೇತ್ರಗಳನ್ನು ಸಂಪರ್ಕ ಸಾಧಿಸುವ Tourism route map ನ್ನು ತಯಾರಿಸಲಾಗಿದೆಯೇ; (ಮಾಹಿತಿ ನೀಡುವುದು)

(ಈ) ಗೋವಾ ಮತ್ತು ಕೇರಳ ರಾಜ್ಯದ ಮಧ್ಯದಲ್ಲಿ ರಾಜ್ಯದ ಕರಾವಳಿಯು ಹೊಂದಿಕೊಂಡಿದ್ದು ಪ್ರವಾಸೋದ್ಯಮಕ್ಕೆ ವಿಪುಲ ಅವಕಾಶವನ್ನು ಹೊಂದಿದ್ದರೂ ಆ

ರಾಜ್ಯಗಳ ಮಟ್ಟಕ್ಕೆ ಹೋಗದಿರುವುದಕ್ಕೆ ಸರ್ಕಾರದ, ಸಚಿವರ ನಿರ್ಲಕ್ಷ್ಯ ಅಧಿಕಾರಿಗಳ ನಿರುತ್ಸಾಹ, ಸ್ಥಳೀಯರ ಅಡೆತಡೆಗಳು ಕಾರಣವಲ್ಲವೇ?